# ತ ಅಕ್ಷರದ ವಚನದ ಅರ್ಥ

1) ತನುವಿನ ಸತ್ವವ ನಿಲಿಸಿತ್ತು. ಮನದ ವಿರಕ್ತಿಯ ಕೆಡಿಸಿತ್ತು
ಘನವ ಕಾಣಲೀಯದು. ಅರು ಹಿರಿಯರ ತರಕಟ ಕಾಡಿತ್ತು
ಚೆನ್ನಮಲ್ಲಿಕಾರ್ಜುನಯ್ಯ, ಸಂಸಾರದ ತೆರೆ ಎನ್ನ ಬರಲೀಯದಯ್ಯ

## ಪದಗಳ ಅರ್ಥ

ಸತ್ವ-ಶಕ್ತಿ
ವಿರಕ್ತಿ- ವೈರಾಗ್ಯ,
ಘನ-ಸತ್ಯ,
ಕಾಡು-ಗೋಳಾಡಿಸು
ತರಕಟ- ಅಯ್ಯ ಅನ್ಯೂ, ಸಾಕುಸಾಕು ಎನ್ನುವಷ್ಟು ಕಾಡುವುದು.
ತೆರೆ-ಅಲೆ,
ಅರು ಹಿರಿಯರು-ಅರವಗತ್ತು ವರ್ಷದ ಹಿರಿಯರು., ಬಹಳತಿಳಿದವರು ಎಂದುಕೊಂಡವರು.

## ವಚನದ ಅರ್ಥ

ತನುವಿನ ಸತ್ವವ ನಿಲಿಸಿತ್ತು. ಮನದ ವಿರಕ್ತಿಯ ಕೆಡಿಸಿತ್ತು. ದೇಹದ ಶಕ್ತಿಯನ್ನು ಕುಂದಿಸಿತ್ತು. ಮನಸ್ಸಿನ ವೈರಾಗ್ಯಭಾವವನ್ನು ನಾಶಮಾಡಿತ್ತು. ಈ ಸಂಸಾರ ಏನೇನು ಮಾಡಿತು ಏನೇನು ಬಿಟ್ಟಿತ್ತು. ಘನವ ಕಾಣಲೀಯದು, ಅರುಹಿರಿಯರ ತರಕಟಕಾ ಇತ್ತು ಇದು ಪರಮಾತ್ಮನನ್ನು ಕಾಣುವೆ ಎಂದು ಹೊರಟರೆ ಕಾಣಲು ಬಿಡುವುದಿಲ್ಲ. ಹಿಂದೆ ಹಿರಿಯರು ಎಂದು ಕೊಂಡವರನ್ನೆಲ್ಲ ಇದು ಮುಳುಗಿಸಿದೆ. ಗಟಗಟ ನೀರು ಕುಡಿಸಿ ತೇಲುಗಣ್ಣು ಮೇಲುಗಣ್ಣು ಮಾಡಿದೆ.
ಚೆನ್ನಮಲ್ಲಿಕಾರ್ಜುನಯ್ಯ ಸಂಸಾರದ ತೆರೆ ಎನ್ನ ಬರಲೀಯದಯ್ಯ.
ಚೆನ್ನಮಲ್ಲಿಕಾರ್ಜುನನೆ ಈ ಸಂಸಾರದ ಅಲೆಗಳು ನಿನ್ನತ್ತ ಬರಲು ಬಿಡುತ್ತಿಲ್ಲ. ಈ ಸಂಸಾರ ಸಾಗರವನ್ನು ನಾನು ಈಜಲಾರೆ. ಈವಚನ ಸಂಸಾರವು ಅನುಭಾವಜೀವಿಗಳ ಮೇಲೆ ಏನೇನು ಪರಿಣಾಮಮಾಡುತ್ತದೆ ಎನ್ನು ವುದನ್ನು ಹೇಳುತ್ತದೆ. ಮನೆ,ಮಡದಿ,ಮಕ್ಕಳು,ಸುಖ,ಭೋಗಕ್ಕಾಗಿಜೀವನವೆಲ್ಲ ದುಡಿಯುವಂತೆ ಮಾಡುತ್ತದೆ. ಈ ದೇಹದ ಆಯುಷ್ಯವೆಲ್ಲ ಸಂಸಾರದ ಆಗುಹೋಗು ಗಳಿಗೆ ಸವೆಯುತ್ತದೆ.ದುಡಿದುದುಡಿದು ಹಣ್ಣಾಗುತ್ತದೆ. ಸಂಸಾರದ ತೆರೆ ಬರಲೀಯದು ಎಂದು ಹೇಳುವಲ್ಲಿ ಸಂಸಾರದ ಅಡ್ಡಿಯನ್ನು ವಿವರಿಸಿದ್ದಾರೆ. ಸಂಸಾರ ಮುಳುಗಿತದೆ ಎನ್ನುವುದೇ ಎಲ್ಲ ಶರಣರ ಅಭಿಪ್ರಾಯ.

2) ತನ್ನ ವಿನೋದಕ್ಕೆ ತಾನೆ ಸೃಜಿಸಿದ ಸಕಲ ಜಗತ್ತ
ತನ್ನ ವಿನೋದಕ್ಕೆ ತಾನೆ ಸುತ್ತಿದನದಕ್ಕೆ ಸಕಲ ಪ್ರಪಂಚವನು.

ತನ್ನ ವಿನೋದಕ್ಕೆ ತಾನೆ ತಿರುಗಿಸಿದನನಂತ ಭವದು:ಖಗಳಲ್ಲಿ ಇಂತನ್ನ
ಚೆನ್ನಮಲ್ಲಿಕಾರ್ಜುನನೆಂಬ ಪರಶಿವನು
ತನ್ನ ಜಗದ್ವಿಲಾಸ ಸಾಕಾದಡೆ ಮತ್ತೆ ತಾನೆ ಪರಿವನದರ ಮಾಯಾಪಾಶವನು.

## ಪದಗಳ ಅರ್ಥ

ಭವ-ಹುಟ್ಟುಸಾವು,
ತಿರುಗಿಸಿದ-ಬರಿಸಿದ .ಜನ್ಮದಲ್ಲಿ ತಂದ.
ವಿಲಾಸ-ಸೃಷ್ಟಿ
ಯಾಪಾಶ-ವಿಲಾಸದ ಜಾಲ,
ಪಾಶ- ಹಗ್ಗ

## ವಚನದ ಅರ್ಥ

ತಪಸ್ಸಿಗೆ ಕುಳಿತು ಸಾಧನೆ ಆರಂಭಿಸಿದ ಕಾಲಕ್ಕೆ ದೇವರು ಏನು ?ಎನ್ನುವ ಸತ್ಯ ಆಗತೊಡಗಿದೆ. ಈ ಜೀವ ಜಗತ್ತು ಬೆಟ್ಟ, ಗುಡ್ಡ, ನೀರು, ಗಿಡ, ಮರ ಧಾನ್ಯ ಇವೆಲ್ಲ ಹೇಗೆ ಉಂಟಾದವು ?ಆಕಾಶ ಎಂದರೇನು? ಮೇಲೇನಿದೆ? ಕುತೂಹಲ, ಬೆರಗು, ಪ್ರಶ್ನೆಗಳು ಮೂಡಿದವು. ಈ ಸೃಷ್ಟಿ ಯಾರಿಂದ?ಯಾಕಾಯಿತು? ಈ ಸುಂದರ ವಚನ ಅಕ್ಕಮಹಾದೇವಿಯವರು. ಕವಿ,ಚಿಂತಕ,ತತ್ವಜ್ಞಾನಿಗಳನ್ನಾಗಿ ಮಾಡಿದೆ. ತನ್ನ ವಿನೋದಕ್ಕೆ ತಾನೆ ಸೃಷ್ಟಿಸಿದ ಸಕಲ ಪ್ರಪಂಚವ . ತನ್ನ ವಿನೋದಕ್ಕಾಗಿ ತಾನೆ ಈ ಎಲ್ಲ ಜಗತ್ತನ್ನು ನಿರ್ಮಾಣ ಮಾಡಿದ. ತನ್ನ ವಿನೋದಕ್ಕೆ ತಾನೆ ತಿರುಗಿಸಿದ ಅನಂತಭವಗಳಲ್ಲಿ, ತನ್ನ ಲೀಲಾವಿ ನೋದಕ್ಕಾ ಗಿ ಅನಂತ ಭವಗಳಲ್ಲಿ ಬರುವಂತೆ ಮಾಡಿದ. ಹುಟ್ಟು ಸಾವು ಇವುಗಳ ನಡುವೆ ಅನಂತ ಮಾಯಾಜಾಲ ಹರಡಿದೆ. ಸೃಷ್ಟಿ ಅನಂತವಾಗಿ ಪ್ರಕಟವಾಗುತ್ತಲೇ ಇದೆ. ಒಂದು ಅನಂತವಾಗುವ ವೀನೋದವೂ ವಿಸ್ಮಯವೂ ಭಯಾ ವಹವೂ ಆಗಿದೆ.ಇದು ಎಂದು ಮುಗಿಯುತ್ತದೆ.ತನಗೆ ಎಂದು ಸಾಕು ಎನ್ನಿಸುತ್ತದೆ ಅಂದು ಮುಗಿಯುತ್ತದೆ. ಇಂತನ್ನ ಚೆನ್ನಮಲ್ಲಿಕಾರ್ಜುನನೆಂಬ ಪರಶಿವನು ತನ್ನ ಜಗ ದ್ವಿಲಾಸ ಸಾಕಾದಡೆ ತಾನೆ ಪರಿವನದರ ಮಾಯಾಪಾಶವನು ಪರಶಿವ. ಚೆನ್ನಮಲ್ಲಿಕಾರ್ಜುನನು ತನ್ನ ಜಗತ್ತಿನ ಆಟ ಸಾಕು ಎನ್ನಿಸಿದಾಗ ಇದರ ಮಾಯಾ ಸೂತ್ರವನ್ನು ತಾನೆ ಹರಿದು ಹಾಕುತ್ತಾನೆ. ಪರಶಿವ, ಚೆನ್ನಮಲ್ಲಿಕಾರ್ಜುನ ಅಕ್ಕಮಹಾದೇವಿಯವರು
ಪರಮಾತ್ಮನಿಗೆ ಕೊಟ್ಟ ಹೆಸರು. ಯಾವಾಗ ಮಾಯಾಪಾಶ ಹರಿಯುತ್ತದೆ ಆಗ ಜಗತ್ತು ಬೆಕೆಂದು ಸ್ಥಿತಿಗೆ ಬರುತ್ತದೆ.

3) ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ.
ತನ್ನ ನೂಲು ತನ್ನನೆ ಸುತ್ತಿ ಸಾವ ತೆರನಂತೆ
ಮನ ಬಂದುದ ಬಯಸಿ ಬೇವುತ್ತಿದ್ದೆನಯ್ಯ.
ಎನ್ನ ಮನದ ದುರಾಶೆಯ ಮಾಣಿಸಿ
ನಿಮ್ಮತ್ತ ತೋರಾ ಚೆನ್ನಮಲ್ಲಿಕಾರ್ಜುನಾ.

## ಪದಗಳ ಅರ್ಥ

ತೆರಣಿಯಹುಳು- ರೇಷ್ಮೆ ಹುಳು

## ವಚನದ ಅರ್ಥ

ತಮ್ಮ ಜೀವನನ್ನು ರೇಷ್ಮೆ ಹುಳುವಿಗೆ ಹೋಲಿಸಿ ಅದರ ಪ್ರತಿಭೆ ಅದಕ್ಕೆ ಮೃತ್ಯುವಾದುದನ್ನು ಈವಚನದಲ್ಲಿ ವಿವರಿಸಿದ್ದಾರೆ. ಹಾಗೆ ಅಕ್ಕನವರ ಪ್ರತಿಭೆ ಸೌಂದರವೇ ಅವರಿಗೆ ಮುಳುವಾದುದನ್ನು ಅವರ ಜೀವನದಲ್ಲಿ ಕಾಣುತ್ತೇವೆ. ತೆರಣಿಯ ಹುಳ್ಳು ತನ್ನ ಸ್ನೇಹದಿಂದ ಮನೆಯ ಮಾಡಿ, ತೆರಣಿಹುಳು ಎಂದರೆ ರೇಷ್ಮೆಹುಳು. ಇದು ತನ್ನ ಪ್ರತಿಭಾ ಕೌಶಲ್ಯದಿಂದ ಸುಂದರ ಚೆಂದ ಗೂಡು ಕಟ್ಟುತ್ತದೆ. ಅದು ಗೂಡು ನಿರ್ಮಿಸಲು ತನ್ನ ಎಂಜಲನ್ನೆ ಮೂಲದ್ರುವ್ಯವಾಗಿ ಮಾಡಿಕೊಂಡು ಚೆಂದ ನೂಲು  ಸೃಷ್ಟಿಸಿ ಗೂಡು ಕಟ್ಟುತ್ತದೆ.ಆ ರೇಷ್ಮೆ ನೂಲೆಗಾಗಿ ಮನುಷ್ಯರು ಅದನ್ನು ಕುದಿನೀರಿನಲ್ಲಿ ಬೇಯಿಸಿ ನೂಲು ತೆಗೆಯುತ್ತಾರೆ. ಆಗ ಗೂಡಿನಲ್ಲಿದ್ದ ಹುಳು ಹೃದಯವಿದ್ರಾವಕವಾದ ಸಾವಿಗೆ ಒಳಗಾಗುತ್ತದೆ. ಹಾಗೆ ಮನುಷ್ಯನು ಮನಸ್ಸು ಬಂದುದನ್ನು ಬಯಸಿ ತಾನೆ ದು:ಖ ತಂದು ಕೊಳ್ಳುತ್ತಾನೆ. ಮನ ಬಂದುದ ಬಯಸಿ ಬೇವುತ್ತಿದ್ದನಯ್ಯ. ವಿರಾಗಿಯಾದ ಅಕ್ಕನವರಿಗೆ ಬೇಡಿಕೆಗಳೆ ಇಲ್ಲ. ಆದರೂ ನನಗೆ ಆಶೆಗಳಿವೆ. ಈ ಆಶೆಯಿಂದ ನಾನು ನಾಶವಾಗುತ್ತಿದ್ದೇನೆ ಎಂದು ಮೊರೆ ಇಟ್ಟಿದ್ದಾರೆ ಅಪಾರ ಆಶೆ ತುಂಬಿಕೊಂಡಿರುವ ನಾವು ಅಕ್ಕನರ ಈ ಎಚ್ಚರಿಕೆಯನ್ನು ಲಕ್ಷಿಸಬೇಕು ಅವರಿಗೆ ಆಶೆಯಾದರೂ ಏನು ಚೆನ್ನಮಲ್ಲಿಕಾರ್ಜುನನೆ ತನ್ನ ಪತಿಯಾಗಬೇಕು ಎನ್ನುವುದನ್ನು ಬಿಟ್ಟರೆ ಅವರಿಗೆ ಯಾವ ಲೌಕಿಕ ಆಶೆಗಳೂ ಇಲ್ಲ. ಹೀಗಿದ್ದರೂ ನಾನು ಮನ ಬಂದುದನ್ನು ಬಯಸಿ ನಾಶವಾಗುತ್ತಿದ್ದೇನೆ ಎಂದು ಪರಮಾತ್ಮನಲ್ಲಿ ಆವರು ಪ್ರಾರ್ಥಿಸಿರುವುದು ಆಶ್ಚರ್ಯ. ಎನ್ನ ಮನದ ದುರಾಶೆಯ ಮಾಣಿಸಿ ನಿಮ್ಮತ್ತ ತೋರಾ. ಅಕ್ಕಮಹಾದೇವಿಯರು, ತಮ್ಮನ್ನು ಹೀಗೆ ವಿಮರ್ಶೆ ಮಾಡಿಕೊಂಡು ಬಿಟ್ಟರೆ ನಮ್ಮ ನಿಮ್ಮಂತಹವರ ಗತಿ ಏನು? ಅವರು ತ್ಯಾಗಿಗಳು, ವಿರಾಗಿಗಳು. ಅವರಲ್ಲಿ ರಾಗವೇ ಇಲ್ಲ. ಹಾಗಿದ್ದರೂ ನನ್ನಲ್ಲಿ ದುರಾಶೆಯಿದೆ ಅದನ್ನು ನನ್ನಿಂದ ದೂರ ಮಾಡು ಎಂದು ಪರಮಾತ್ಮನಲ್ಲಿ ಪ್ರಾರ್ಥಿಸಿದ್ದಾರೆ. ವಚನದ ಭಾವವೇನು?ಪ್ರತಿಭಾ ಕೌಶಲ್ಯವಿದ್ದ ರೇಷ್ಮೆಹುಳು ತನ್ನ ಪ್ರತಿಭೆಯಿಂದಲೆ ತನಗೆ ಅಂತ್ಯ ತಂದು ಕೊಂಡಿತು . ಇನ್ನು ದುರಾಶೆಯ ಈ ಮನುಷ್ಯ ನಾಶವಾಗಲು ತಡವೆ? ಅಯ್ಯಾ, ಮನುಷ್ಯನೆ ಸರಳಜೀವನ ಮಾಡು . ರೇಷ್ಮೆ ಹುಳದಂತೆ ವೈಭವದ ಮನೆ ಕಟ್ಟಿಕೊಳ್ಳುವೆ .ನಿನ್ನಲ್ಲಿ ದಾಹಕ್ಕೆ ಕೊನೆಯೇ ಇಲ್ಲ.ರಾಗ ಮುಕ್ತನಾಗು ತೊಂದರೆ ಇರದು .

4) ತನುವೆಲ್ಲವ ಜರೆದು ಮನವ ನಿಮ್ಮೊಳಗಿರಿಸಿ
ಘನ ಸುಖದಲೋಲಾಡುವ ಪರಿಯ ತೋರಯ್ಯ ಎನಗೆ.
ಭಾವವಿಲ್ಲದ ಬಯಲ ಸುಖವು ಭಾವಿಸಿದಡೆಂತಹುದು?
ಬಹುಮುಖರುಗಳಿಗೆ?
ಕೇಳಯ್ಯಾ,ಶ್ರೀ ಶೈಲಚೆನ್ನಮಲ್ಲಿಕಾರ್ಜುನದೇವಾ
ನಾನಳಿದು ನೀನುಳಿದ ಪರಿಯ ತೋರಯ್ಯ ಪ್ರಭುವೆ.

## ಪದಗಳ ಅರ್ಥ

ಜರೆದು--ಹತೋಟಿಯಲ್ಲಿಟ್ಟು
ಘನಸುಖ-ಪರಮಾನಂದ ನಾನು-ಜೀವ

## ವಚನದ ಅರ್ಥ

ತನುವೆಲ್ಲವ ಜರೆದು ಮನವ ನಿಮ್ಮೊಳಗಿರಿಸಿ ಘನಸುಖದಲೋಲಾಡುವ ಪರಿಯ ತೋರಯ್ಯ ಎನಗೆ ತನುವ ಹತೋಟಿಯಲ್ಲಿರಿಸಿಕೊಂಡು ಮನಸ್ಸನ್ನು ನಿನ್ನಲ್ಲಿ ಸ್ಥಿರವಾಗಿರಿಸಿ ಪರಮಾನಂದದಲ್ಲಿ ಲೀನವಾದ ಪರಿಯನ್ನು ನನಗೆ ತೋರಿಕೊಡು. ಭಾವವಿಲ್ಲದ ಬಯಲಸುಖವು ಭಾವಿಸಿದಡೆಂತಹುದು ?ಭಾವವೆ ಇಲ್ಲದ ಬಯಲಿನ
ಆನಂದವು ಭಾವಿಸಿದರೆ ಬರುವುದೆ? ನಾನಳಿದು ನೀನುಳಿದ ಪರಿಯ ತೋರಯ್ಯ ಎನಗೆ . ನಾನು ಹೋಗಬೇಕು. ನೀನು ಎಂದರೆ ಆತ್ಮಚೆನಮಲ್ಲಿಕಾರ್ಜುನನ ಚೆನ್ನೆ ನಿನ್ನಲ್ಲಿ ಉಳಿದ ರೀತಿಯನ್ನು ನನಗೆ ತೋರಿಕೊಡು. ಅಹಂಕಾರ ನಾಶಮಡಿಕೊಂಡ ನಾನು ಎನ್ನುವ ದೇಹಭಾವವನ್ನು ಮೀರಿದ ಪರಿಯನ್ನು ನನಗೆ ತೋರಿಕೊಡು. ಇದು ಶಿವಾನುಭಾವಗೋಷ್ಠಿಯ ವಚನ. ಪ್ರಭುದೇವರೊಂದಿಗೆ ಅನುಭಾವ ನಡೆ ಸಿದ್ದು. ಇಲ್ಲಿ ಎರಡು ಪ್ರಶ್ನೆ ಗಳಿವೆ . 1. ತನುವೆಲ್ಲವ ಜರೆದು ಮನವ ನಿಮ್ಮೊಳಗಿರಿಸಿ ಘನಸುಖದಲೋಲಾಡುವ ಪರಿಯ ತೋರಯ್ಯ ಎನಗೆ. ದೇಹಭಾವವನ್ನು ಗೆದ್ದು ಮನಸ್ಸನ್ನು ಸಂಪೂರ್ಣ ಪರಮಾತ್ಮನಲ್ಲಿರಿಸಿ ಪರಮಸುಖದಲ್ಲಿರುವ ರೀತಿ ಯಾವುದು? 2.ಮನಸ್ಸನ್ನು ಪರಮಾತ್ಮನಲ್ಲಿರಿಸದೆ ಸ್ಥಿರವಾದ ಪರಮಸುಖವು ಚಂಚಲ ಮನಸ್ಸಿನವರಿಗೆ ಹೇಗೆ ತಾನೆ ದೊರೆಯುವುದು. ಸೋಹಂ ಎನ್ನುವ ಭಾವ ಹೋಗಿ ಎಲ್ಲ ನಿನ್ನದೆನ್ನುವ ಭಾವ ಯಾವಾಗ ಉಂಟಾಗುತ್ತದೆ .
ಮನಸ್ಸಿಗೆ ದೇಹವೆ ಆಶ್ರಯ. ದೇಹ ಇಲ್ಲ ಮನಸ್ಸು ಇಲ್ಲ. ಆದರೆ ದೇಹ ಇರುವವರೆಗೆ ಮನಸ್ಸಿಗೆ ಬಿಡುಗಡೆ ಇಲ್ಲ. ಈ ದೇಹ ಎತ್ತರ ಏರುವ ಮನಸ್ಸನ್ನು ಕೆಳಗೆ ಜಗ್ಗಿ ಬಿಡುತ್ತದೆ. ಅಲ್ಲದೆ ಮನಸ್ಸು ಕೂಡ ಚಂಚಲ ಸ್ವಭಾವದ್ದು ಇಂತಹ ಮನಸ್ಸು : ದೇಹ ಪಡೆದು ಪರಮಾತ್ಮನನ್ನು ಸಾಧಿಸಿದ ಹಾಗೇ ಆಯಿತು. ಈ ತನು ಮನ ಆಶ್ರ ಯಿಸಿರುವ ಜೀವನು ಈಭವದಿಂದ ಬಿಡುಗಡೆ ಪಡೆದು ಮುಕ್ತಗೊಳ್ಳುವುದು ಕನಸೇ ಸರಿ. ಪರಮಾನಂದದ ಬಯಲ ಸುಖವು ಕೇವಲ ಭಾವಿಸುವುದರಿಂದ ಬರುವುದೆ? ಭಾವ ಬೇರೆ ಯಾರೂ ಅಲ್ಲ. ಅದು ಜೀವ. ಬ್ರಹ್ಮದ ಬಿಂದು ಜೀವ. ನಾನುದೇಹವಲ್ಲ ನಾನು ಇಂದ್ರಿಯವಲ್ಲ. ನಾನು ಪ್ರಾಣವೂ ಆಲ್ಲ. ನಾನು ಜೀವನು ಅಲ್ಲ. ನಾನು ಬ್ರಹ್ಮ ದಿಂದ ಬಂದಿರುವೆ. ಬ್ರಹ್ಮದಲ್ಲಿ ಸೇರುವೆ. ಈಅರಿವು ಅನುಭವ ಎಲ್ಲಿಯವರೆಗೆ ಇಲ್ಲ. ಇವನು ಬ್ರಹ್ಮವಾಗುವುದು ಕನಸೆ ಸರಿ.ನಾನು ಅಲ್ಪ ಎಂದು ತಿಳಿದರೆ ಅಲ್ಪ ಬ್ರಹ್ಮ ಎಂದು ತಿಳಿದರೆ ಬ್ರಹ್ಮ. ಈಭಾವಿಸುವ ಅನುಭವಿಸುವ ದೊಡ್ಡ ವ್ಯಕ್ತಿತ್ವವನ್ನು ನಾನು ಮೊದಲುಗಳಿಸಿ ಕೊಳ್ಳಬೇಕು. ಬಯಲ ಸುಖವೆ ಬ್ರಹ್ಮದ ಅನುಭವ. ಇಂತಹ ಬಯಲ ಸುಖವನ್ನು ಚಂಚಲ ಮನಸ್ಸು, ಅಚಿರ ದೇಹದಿಂದ ಸಾಧಿಸಿ ಕೊಳ್ಳುವುದು ಹೇಗೆ? ದೇಹ, ಇಂದ್ರಿಯಗಳು ಬಹಿರ್ಮುಖವಾಗುವುದನ್ನು ಬಿಟ್ಟು ಬ್ರಹ್ಮದ ಅನುಭವ ಪಡೆಯಲು ಜೀವನಿಗೆ ಸಹಕಾರಿಯಾಗಬೇಕು. ಬ್ರಹ್ಮದ ಅನುಭವವು ಜ್ಞಾನ,ಭಕ್ತಿಯಿಂದ ಅನುಭವಿಸುವಂತದು. ನಮ್ಮ ತನುವಿನ ಒಂದೊಂದು ಜೀವಕೋಶವು, ನಮ್ಮ ಎಲ್ಲ ಇಂದ್ರಿಯಗಳೂ ಈಇಂತಹ ಬ್ರಹ್ಮಾ

ನುಭಾವಕ್ಕೆ ಸಿದ್ಧಗೊಳ್ಳ ಬೇಕು. ನಮ್ಮನ್ನು ಸಿದ್ಧಗೊಳಿಸದ ಹೊರತು ಬ್ರಹ್ಮದ ಅನು ಭವವಾಗುವುದಿಲ್ಲ. ಈ ಅನುಭವ ಪಡೆಯಲು ಮೊದಲು ಬಯಲ ಬ್ರಹ್ಮವನ್ನು ನೋಡುತ್ತ ಕೂಡಬೇಕು. ನಂತರ ಆ ಬಯಲನ್ನು ಅನುಭವಿಸುವುದಕ್ಕೆ ತೊಡಗಬೇಕು. ಈ ಅನುಭವಿಸುವ ಪ್ರಯತ್ನದಲ್ಲಿ ಎರಡು ಕ್ರಿಯೆಗಳಿವೆ. 1. ದೇಹ, ಮನಸ್ಸಿನ ಬೇಡಿಕೆಗಳು ಇಲ್ಲವಾಗುವುದು. 2. ದೇಹ, ಮನಸ್ಸಿನ ಹಂತವನ್ನು ದಾಟುವುದು. 3.ಜೀವನುಬ್ರಹ್ಮಾನುಭೂತಿ ಸ್ಥಿತಿಯಲ್ಲಿ ಕರಗುವುದು. ಇದನ್ನು ಸಾಧಿಸಿಕೊಳ್ಳುವುದು ಹೇಗೆ ? ಪ್ರಶ್ನೆ ಕೇಳುವಲ್ಲಿಯೆ ಉತ್ತರವೂ ಇದೆ. ಆ ಬ್ರಹ್ಮದ ಅನುಭವವನ್ನು ಅವರು ಅನುಭವಿಸಿಯೂ ಇದ್ದಾರೆ. ತ್ಯಾಗವಿಲ್ಲದೆ ಆನಂದವಿಲ್ಲ. ಬ್ರಹ್ಮಚರ್ಯ,ಸನ್ಯಾಸತ್ವಗಳು ಮನಸ್ಸನ್ನು ತುಂಬಬೇಕು. ಸ್ವಾರ್ಥತ್ಯಾಗದ ತಳಹದಿಯಮೇಲೆ ಬ್ರಹ್ಮಾನುಭೂತಿಯ ಅನುಭವವಿದೆ. ಎಲ್ಲಿಯವರೆಗೆ ನಾನು, ನನ್ನದು ದಾಟುವುದಿಲ್ಲ. ಬ್ರಹ್ಮಾನುಭೂತಿ ಇಲ್ಲ. ಲೌಕಿಕ ಮನುಷ್ಯನನ್ನು ಕಟ್ಟಿ ಹಾಕಿಬಿಡುತ್ತದೆ.ನಾನಳಿದು ನೀನುಳಿದ ಪರಿಯ ತೋರಯ್ಯ ಪ್ರಭುವೆ?ನಾನು ಯಾವಾಗ ಅಳಿಯುತ್ತದೆ. ನೀನು ಯಾವಾಗ ತೋರುತ್ತದೆ. ನಾನಳಿಯುವುದು ಎಂದರೇನು? ದೇಹಮನಸ್ಸುಗಳ ಸಂಬಂಧಗಳಿಗೆ ಸ್ಪಂದಿ ಸದಿರುವುದು.ಈ ಸಂಬಂಧ ಹೋಯಿತು ನಾನು ಹೋದಂತೆಯೆ ಸರಿ. ಅದಕ್ಕಾಗಿಯೆ ಸರ್ವಸಂಗ ಪರಿತ್ಯಾಗ. ಇದು ನಾನಳಿಯುವ ಪರಿ. ನಾನು ಯಾವಾಗ ಹೋಯಿತು ಆಗ ಎಲ್ಲವೂ ಹೋಯಿತು.ನಾನು ಹೋಗಿ ಉಳಿದುದೆಲ್ಲವೂ ನೀನೆ. ನಾನುನೀನಾಯಿತು. ಆ ನೀನು ಪರಬ್ರಹ್ಮ. ಎಲ್ಲವೂನಾನು ಸಂಬಂಧದಿಂದ ಬಂದದ್ದು. ನಾನು ಹೋಯಿತು ಎಲ್ಲವೂ ಹೋಯಿತು. ಸಂಬಂಧಗಳೂ ಹೋದವು. ಅಲ್ಲಿ ಹುಟ್ಟು ಇಲ್ಲ. ಸಾವು ಇಲ್ಲ ಎಲ್ಲವೂ ಬ್ರಹ್ಮ. ಇದು ಸಾಧ್ಯಮಾಡಿ ಕೊಳ್ಳುವುದು ಹೇಗೆ ಎನ್ನುವುದರೊಂದಿಗೆ ವಚನ ಮುಕ್ತಾಯವಾಗುತ್ತದೆ.

ಅಕ್ಕಮಹಾದೇವಿಯವರ ಸುಳುಹೇ ಅನಂತ
ಬ್ರಹ್ಮದ ಸುಳುಹಾಗಿದೆ. ಅವರ ದರ್ಶನಭಾಗ್ಯದಿಂದಲೆ ಬ್ರಹ್ಮದ ಅನುಭವವಾಗುತ್ತದೆ. ಈ ಬ್ರಹ್ಮದ ಅನುಭವ ಪಡುಕೊಳ್ಳಲು ನಮ್ಮ ಕಣ್ಣು ಇಂದ್ರಿಯಗಳಿಗೆ ಯೋಗ್ಯತೆ ಬೇಕು ಅಷ್ಟೆ .ಒಂದು ಶ್ರೇಷ್ಠಗ್ರಂಥ ದಲ್ಲಿರುವ ಜ್ಞಾನವನ್ನು ಅರಿಯಬೇಕಾದರೆ ವ್ಯಕ್ತಿಯಲ್ಲೂ ಕೆಲವು ಅರಿವಿನ ಸಿದ್ಧತೆ ಬೇಕು. ಇಲ್ಲದಿದ್ದರೆ ಪುಸ್ತಕದ ಜ್ಞಾನ ಮಸ್ತಕಕ್ಕೆ ಬರುವುದಿಲ್ಲ.

5)ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು. ಹದುಳಿಗರಲ್ಲದವರಲ್ಲಿ
ಗಂಧಾಕ್ಷತೆಯನೊಲ್ಲೆಯಯ್ಯ ನೀನು ಅರಿವು ಕಣ್ದೆರೆಯದವರಲ್ಲಿ
ಆರತಿಯನೊಲ್ಲೆಯಯ್ಯ ನೀನು. ಭಾವಶುದ್ಧವಿಲ್ಲದವರಲ್ಲಿ
ಧೂಪವನೊಲ್ಲೆಯಯ್ಯ ನೀನು ಪರಿಣಾಮಿಗಳಲ್ಲದಗವರಲ್ಲಿ
ನೈವೇದ್ಯವನೊಲ್ಲೆಯಯ್ಯ ನೀನು. ತ್ರಿಕರಣ ಶುದ್ಧವಿಲ್ಲದವರಲ್ಲಿ
ತಾಂಬೂಲವನೊಲ್ಲೆಯಯ್ಯ ನೀನು.
ಹೃದಯಕಮಲವರಳದವರಲ್ಲಿ ಇರಲೊಲ್ಲೆಯಯ್ಯ ನೀನು. ಎನ್ನಲ್ಲಿ
ಏನುಂಟೆಂದು ಎನ್ನ ಕರಸ್ಥಲವನಿಂಬುಗೊಂಡೆ ಹೇಳಾ ಚೆನ್ನಮಲ್ಲಿಕಾರ್ಜುನಾ.

## ಪದಗಳ ಅರ್ಥ

ತನುಕರಗದವರು-ಕಾಯಕಮಾಡದವರು,
ಮನಕರಗದವರು-ಇನ್ನೊಬ್ಬರ ಕಷ್ಟಕ್ಕೆ ಮರುಗದವರು. ಹದುಳ-ಕ್ಷೇಮ,
ಪರಿಣಾಮ-ಆನಂದ, ಸಂತೃಪ್ತಿ,
ತ್ರಿಕರಣ-ಮನ ಚಿತ್ತ ಬುದ್ಧಿ ;

## ವಚನದ ಅರ್ಥ

ಪರಮಾತ್ಮನು ಯಾರಿಂದ ಭಕ್ತಿಪೂಜೆ ಸ್ವೀಕರಿಸುತ್ತಾನೆಂಬುದನ್ನು ಈ ವಚನ ದಲ್ಲಿ ವಿವರಿಸಿದ್ದಾರೆ.ಅನಂತಕಾಲ ಭಕ್ತಿಪೂಜೆ,ಸಾಧನೆಯಲ್ಲಿದ್ದ ಅಕ್ಕಮಹಾದೇವಿಯವರು ಪರಮಾತ್ಮನಿಗೆ ನಾವು ನಡೆಸುತ್ತಿರುವ ಅಷ್ಟವಿಧಾರ್ಚನೆಯು ಸ್ವೀಕಾರವಾಗುವುದೆ? ಇಲ್ಲವೆ? ತಮ್ಮಲ್ಲಿ ಆತ್ಮಾವಲೋಕನ,ಚಿಂತನೆ ನಡೆಸಿದ್ದಾರೆ. ಭಕ್ತಿಪೂಜೆಯ ಉದ್ದೇಶಗಳೇನಿರಬಹುದು? ಭಕ್ತಿ ಮತ್ತುಭಕ್ತ ಇವರ ಸಂಬಂಧ ಎಂಥದು? ಈಎಲ್ಲ ಸಂಗತಿ ಗಳು ಇಲ್ಲಿ ನಿಕಷಕ್ಕೆ ಬಂದಿವೆ. ಧರ್ಮೋಪದೇಶದಲ್ಲಿ ತೊಡಗಿದ ಅಕ್ಕನವರು ಈವಚನವನ್ನು ಇನ್ನಷ್ಟು ಅಳದಲ್ಲಿ ಚಿಂತಿಸಿದ್ದಾರೆ.ತನು ಕರಗದವರಲ್ಲಿ ಮಜ್ಜ ನವನೊಲ್ಲೆಯಯ್ಯ ನೀನು. ಪರಮಾತ್ಮನು ಮಜ್ಜನ,ಜಲಾಭಿಷೇಕವನ್ನು ಯಾರಿಂದ ಸ್ವೀಕರಿಸುತ್ತಾನೆ ಎಂದರೆ ಯಾರ ಶರೀರ ಕರಗುತ್ತದೆ ಅಂದರೆ ಯಾರು ಸತ್ಯ ಶುದ್ಧ ಕಾಯಕ ಮಾಡುತ್ತಾರೆ ಅವರಿಂದ ಮಜ್ಜನ ಸ್ವೀಕರಿಸುತ್ತಾನೆ. ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು. ಯಾರ ಮನಸ್ಸು ಕರಗುವುದಿಲ್ಲ ಅಂತಹವರಿಂದ ಹೂವುಗಳ ಪೂಜೆಯನ್ನು ಪರಮಾತ್ಮನು ಸ್ವೀಕರಿಸುವುದಿಲ್ಲ. ಮನಸ್ಸು ಕರಗುವುದು ಎಂದರೇನು? ದೀನರು, ದುರ್ಬಲರು, ಅಸಹಾಯಕರ ವಿಚಾರದಲ್ಲಿ ದಯೆ ಕರು ಣೆಯಿಂದ ಇರಬೇಕು. ಅಸಹಾಯಕರಿಗೆ ಸಹಾಯ ಮಾಡಬೇಕು. ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು. ಯಾರು ಸತ್ಯದಲ್ಲಿ ನಡೆಯುವುದಿಲ್ಲ ಅಂತಹವರಿಂದ ಗಂಧ.ಅಕ್ಷತೆ ಸ್ವೀಕರಿಸುವುದಿಲ್ಲ. ನಾವುಸತ್ಯದಲ್ಲಿ ನಡೆಯಬೇಕು. ಅದು ದೇವರಿಗೆ ಪ್ರೀತಿ.ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು. ಯಾರಲ್ಲಿ ಅರಿವಿನ ಬೆಳಕು ಇಲ್ಲ. ಯಾರು ಅಜ್ಞಾನವನ್ನು ದಾಟಿಲ್ಲ ಅಂತಹವರಿಂದ ಪರಮಾತ್ಮನು ಆರತಿ ಸ್ವೀಕರಿಸುವುದಿಲ್ಲ.ಆರತಿ ಬೆಳಗುವುದು ಅರಿವು, ಬೆಳಕಿನ ಸಂಕೇತ. ಅನೇಕರು ಆರತಿ ಬೆಳಗುವುದರಲ್ಲಿ ಅನೇಕ ವೈವಿಧ್ಯ ಆಚರಿಸುತ್ತಾರೆ. ಎಷ್ಟೇ ವೈವಿಧ್ಯದ ಆರತಿ ಬೆಳಗಿದರೂ ನಮ್ಮಲ್ಲಿ ಮುಖ್ಯ ಅವಿವು ಬೆಳಗಿರಬೇಕು. ಭಾವ ಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯ್ಯ ನೀನು. ಧೂಪ ಹಾಕುವುದು ಪರಿಶುದ್ಧಿ,ಪಾವಿತ್ರ್ಯತೆಯ ಸಂಕೇತ. ಪರಿಶುದ್ದಿಯು ಮೊದಲು ನಮ್ಮ ಭಾವದಲ್ಲಿ ಬೇಕು. ನಮ್ಮ ಭಾವದಂತೆ ನಮ್ಮ ಜೀವನ. ಒಳ್ಳೆಯ ಭಾವನೆಗಳನ್ನು ನಾವು ಯಾವಾಗಲೂ ವೃದ್ಧಿ ಸಿಕೊಳ್ಳಬೇಕು. ಒಳ್ಳೆಯ ಭಾವನೆಗಳೇ ಶ್ರೇಷ್ಠ ಜೀವನಕ್ಕೆ ದಾರಿದೀಪ. ಅಂತರಂಗ ಶುದ್ದಿಯನ್ನು ಧೂಪ ಸೂಚಿಸುತ್ತದೆ. ಅಂತರಂಗಶುದ್ದಿಯಿಲ್ಲದೆ ಹೊರಗೆ ಎಷ್ಟೇ ಧೂಪ ಹಾಕಿದರೂ ಉಪಯೋಗವಿಲ್ಲ. ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು. ಪರಿಣಾಮ ಎಂದರ ಆನಂದ. ನಾವು ಏನು ಕಾರ್ಯ ಜೀವನ

ಮಾಡುತ್ತೇವೆ ಅದರಲ್ಲಿ ತೃಪ್ತಿ ಬೇಕು. ಎಡೆ, ನೈವೇದ್ಯ ಕೊಡುತ್ತೇವೆ. ಹಾಗೆ ನೀಡುವಾಗ ಮೊದಲು ನಮ್ಮಲ್ಲಿ ಶಾಂತಭಾವ ಬೇಕು. ಸಮಾಧಾನ ಚಿತ್ತ ಬೇಕು. ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು. ಮನ,ಚಿತ್ತ,ಬುದ್ದಿ ಇವು ತ್ರಿಕರಣಗಳು. ಇವು ಮೊದಲು ಶುದ್ದಿ ಇರಬೇಕು. ಆಗ ತಾಂಬೂಲ ಸ್ವೀಕಾರವಾಗುತ್ತದೆ. ಹೃದಯಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯ ನೀನು. ಯಾರ ಹೃದಯವು ವೈಶಾಲ್ಯತೆಯಿಂದ ಇದೆ ಅಂತಹವರಲ್ಲಿ ಪರಮಾತ್ಮನು ನೆಲೆಸಿರುತ್ತಾನೆ. ಇನ್ನೊಬ್ಬರ ವಿಚಾರದಲ್ಲಿ ಯಾವಾಗಲೂ ಪ್ರೀತಿ, ಅಂತಃಕರಣದಿಂದ ಇರಬೇಕು. ಎನ್ನಲಿ ಏನುಂಟೆಂದು ಎನ್ನ ಕರಸ್ಥಲವನಿಂಬುಗೊಂಡೆ ಹೇಳಾ? ಚೆನ್ನಮಲ್ಲಿಕಾರ್ಜುನಾ. ಪರಮಾತ್ಮನೆ ನನ್ನಲ್ಲಿ ಏನಿದೆ ಎಂದು ನೀನು ನನ್ನ ಕರಸ್ಥಲದಲ್ಲಿ ಪೂಜೆಗೊಳ್ಳುತ್ತಿರುವೆ. ತಮ್ಮಂತ ರಂಗವನ್ನು ವಿಶ್ಲೇಷಣೆ ಮಾಡಿಕೊಂಡ ವಚನವಿದು. ಈಪೂಜಾವಸ್ತು, ಈ ಪೂಜಾ ಮಹತ್ವದ ಬಗೆಗೆ ಕೆಲವು ಸಂಗತಿಗಳನ್ನು ಇಲ್ಲಿ ತಿಳಿಸಬೇಕು. ಎಲ್ಲಿ ಪೂಜಾದಿಗಳು ನಡೆಯುತ್ತವೆ ಆಸ್ಥಳ ಜಾಗೃತ ಸ್ಥಳವಾಗುತ್ತದೆ. ಅಲ್ಲಿ ಅಶುಭದ ಆಗಮನವಾಗುವುದಿಲ್ಲ. ನಮಗೆ, ಆವರಣಲ್ಲಿ ಶ್ರೇಷ್ಠತೆ ನೆಲೆಸಿ ಆತ್ರೋನ್ನತಿ ಉಂಟಾಗುತ್ತದೆ. ದೀಪ ಧೂಪ, ಹೂವು ಅಕ್ಷತೆ, ಗಂಧ, ಊದಿನಕಡ್ಡಿ ಇವುಗಳ ಉಪಯೋಗವು ವ್ಯಕ್ತಿಮನೆ ಮಂದಿರಗಳನ್ನು ಉನ್ನತಿಗೆ ಕರೆದುಕೊಂಡು ಹೋಗುತ್ತವೆ.

6)ತನುಶುದ್ಧ ಮನಶುದ್ಧ ಭಾವಶುದ್ಧವಾದವರೆನಗೊಮ್ಮೆ ತೋರಾ.
ನಡೆಯೆಲ್ಲ ಸದಾಚಾರ, ನುಡಿಯೆಲ್ಲ ಶಿವಾಗಮ.
ಸತ್ಯಶುದ್ಧವಾದವರನೆನಗೊಮ್ಮೆ ತೋರಾ.
ಕತ್ತಲೆಯ ಮೆಚ್ಚಿ ತಳವೆಳಗಾಗಿ ಒಳಹೊರಗೊಂದಾಗಿ ನಿಂದ
ಶರಣರನೆನಗೊಮ್ಮೆ ತೋರಾ ಚೆನ್ನಮಲ್ಲಿಕಾರ್ಜುನಾ.

### ವಚನದ ಅರ್ಥ

ತನುಶುದ್ಧ ಅಚಾರಕ್ಕೂ, ಮನಶುದ್ಧ, ಭಾವಶುದ್ಧ ಅಂತರಂಗಕ್ಕೂ ಸಂಬಂಧಿಸಿದ್ದು. ಇದನ್ನೆ ಅಕ್ಕಮಹಾದೇವಿ ಯರು ನಡೆಯಲ್ಲಿ ಸದಾಚಾರ, ನುಡಿಯೆಲ್ಲ ಶಿವಾಗಮ ಎಂದಿದ್ದಾರೆ. ನುಡಿ,ನಡೆ ಒಂದಾದವರು ನಿತ್ಯಶುದ್ದರು. ಇವರನ್ನು ನನಗೆ ದರ್ಶನ ಮಾಡಿಸು ಎಂದು ಪರಮಾತ್ಮನಲ್ಲಿ ಪ್ರಾರ್ಥಿಸಿದ್ದಾರೆ. ಕತ್ತಲೆಯಮೆಚ್ಚಿ ತಳವೆಳಗಾಗಿ ಇದು ಮಾತ್ರ ವಿಶೇಷ ಮಾತು. ಇದು ದೇವರ ಬಗೆಗಿನ ಸತ್ಯ ಅಕ್ಕನವರು ಕಂಡುಕೊಂಡದ್ದು. ದೇವರು ಎಲ್ಲರಿಗೊಂದು ಕತ್ತಲೆಯೆ. ಅದನ್ನು ಬೆಳಕು, ಸತ್ಯ', ಇನ್ನೂ ಏನೇನೊ ವ್ಯಾಖ್ಯಾನಿ ಸುತ್ತೇವೆ. ಯಾರು ಎಷ್ಟೇ ವಾಖ್ಯಾನಿಸಿದರೂ ಎಲ್ಲ ವ್ಯಾಖ್ಯಾನಗಳಿಗೆ ಮೀರಿದ್ದು ಆ ನಿಗೂಢಸತ್ಯ. ಈ ಸತ್ಯವನ್ನು ದರ್ಶನ ಎಂದು ಮಾತಿನಲ್ಲಿ ವೈಭವಿಸುತ್ತೇವೆ. ಈ ಮಾತಿನ ವೈಭವವನ್ನು ದಾಟಿದ್ದು ಆ ಸತ್ಯ. ಇದರ ಶೋಧನೆಯ ಬೋಧನೆ ಮನಸ್ಸಿಗಾದಾಗ ನಾವು ತಳವೆಳಗಾಗುತ್ತೇವೆ.

7)ತನು ಶುದ್ಧವಾಯಿತ್ತು ಶಿವಭಕ್ತರೊಕ್ಕುದ ಕೊಂಡು ಎನ್ನ ಮನ
ಶುದ್ಧವಾಯಿತ್ತು ಅಸಂಖ್ಯಾತರ ನೆನೆದು. ಎನ್ನ
ಕಂಗಳು ಶುದ್ಧವಾಯಿತ್ತು ಸಕಲಗಣಂಗಳ ನೋಡಿ. ಎನ್ನ ಶೋತ್ರ
ಶುದ್ಧವಾಯಿತ್ತು ಅವರ ಕೀರ್ತಿಯ ಕೇಳಿ. ಎನ್ನ
ಭಾವನೆ ಎನಗಿದು ಜೀವನ ಲಿಂಗತಂದೆ
ನೆಟ್ಟನೆ ನಿಮ್ಮ ಮನಮುಟ್ಟಿ ಪೂಜಿಸಿ ಭವಗೆಟ್ಟೆ ಕಾಣಾ ಚೆನ್ನಮಲ್ಲಿಕಾರ್ಜುನಾ.

## ಪದಗಳ ಅರ್ಥ

ಒಕ್ಕುದು-ಒಕ್ಕಮಿಕ್ಕ ಪ್ರಸಾದ. ಅನುಗ್ರಹ ಪ್ರಸಾದ. ನೀಡಿದ್ದು

## ವಚನದ ಅರ್ಥ

ತನು ಶುದ್ಧವಾಯಿತ್ತು ಶಿವಭಕ್ತರೊಕ್ಕುದ ಕೊಂಡೆನ್ನ. ಶಿವಭಕ್ತರು ತಾವು ಒಕ್ಕು ಮಿಕ್ಕ ಪ್ರಸಾದ ನೀಡಿದುದರಿಂದ ನನ್ನ ತನು ಶುದ್ಧವಾಯಿತ್ತು. ಒಕ್ಕು ಮಿಕ್ಕ ಪ್ರಸಾದ ಎಂದೆ ಏನು? ರೈತರು ಹುಲ್ಲು ಒಕ್ಕಲು ಬತ್ತ ಎಂದು ಹೇಳುತ್ತಾರೆ. ಈ ಬತ್ತವು ಮೊದಲು ಕುಯ್ದು ಬತ್ತ ಬಡಿದ ಮೇಲೆ ಮತ್ತೆ ಆ ಹುಲ್ಲನ್ನು ಹರಡಿ ದನಗಳಿಂದ ತುಳಿಸುತ್ತಾರೆ . ಆಗ ಇದ್ದಬದ್ದ ಬತ್ತವು ಚೆಲ್ಲಾಡಿಬಿದ್ದಿರುತ್ತದೆ. ಹುಲ್ಲುಕಟ್ಟಿದಮೇಲೆ ಸಿಕ್ಕ ಬತ್ತವನ್ನು ತೂರಿ ಬಂದ ಬತ್ತ ಏನಿದೆ ಅದು ಹುಲ್ಲು ಒಕ್ಕಲು ಬತ್ತ.ಹಾಗೆ
ಶರಣರ ಮನೆಯಲ್ಲಿ ಪ್ರಸಾದ ಸಿದ್ಧವಾದುದು ಆ ದಿನ ಎಲ್ಲರಿಗೆ ನೀಡಿದಮೇಲೆ ಪಾತ್ರಯಲ್ಲಿ ಏನು ಉಳಿದಿರುತ್ತದೆ ಅದು ಒಕ್ಕ ಮಿಕ್ಕ ಪ್ರಸಾದ. ಅಂದರೆ ಕೊನೆಯಲ್ಲಿ ಪ್ರಸಾದ ಸ್ವೀಕರಿಸುವ ಉದ್ದೇಶ ಏನು? ಎಂದರೆ ಹಸಿವಿಗಾಗಿ ದೇಹಮೋಹ ಏನಿದೆ ಅದನ್ನು ಗೆಲ್ಲುವುದೆ ಆಗಿದೆ. ನನಗಿಂತಲೂ ಇತರರು ಚೆನ್ನಾಗಿರಬೇಕು ಮೊದಲು ಅವರ ಪ್ರಸಾದ ಆಗಲಿ, ಕೊನೆಯಲ್ಲಿ ಏನು ಉಳಿದಿದೆ ಅದು ಪ್ರಸಾದ. ಎನ್ನುವ ಲೋಕಹಿತ ಅಲ್ಲಡಗಿದೆ. ತನುವಿನ ಮೋಹ ಗೆಲ್ಲುವುದು ಹೀಗೆ. ಇದು ಶಿವಭಕ್ತರ ಮನೆಯ ಪ್ರೀತಿ ಗಳಿಸುವ ರೀತಿ. ಮನಶುದ್ಧವಾಯತ್ತು ಅಸಂಖ್ಯಾತರ ನೆನೆದೆನ್ನ, ನನ್ನ ಮನಸ್ಸು ಶುದ್ಧವಾಯಿತ್ತು ಎಲ್ಲ ಶರಣರ ನೆನೆದು ಕಂಗಳು ಶುದ್ಧವಾಯಿತ್ತು ಸಕಲ ಗಣಂಗಳ ನೋಡಿ ಎನ್ನ. ನನ್ನ ಕಣ್ಣುಗಳು ಸಕಲ ಶರಣರ ದರ್ಶನದಿಂದ ಶುದ್ಧವಾ ದವು .ಶೋತ್ರ ಶುದ್ಧವಾಯಿತ್ತು ಅವರ ಕೀರ್ತಿಯ ಕೇಳಿ ಎನ್ನ. ನನ್ನ ಕಿವಿಗಳು ಶರಣರ ಕೀರ್ತಿ ಕೇಳಿ ಶುದ್ಧವಾದವು. ಎನ್ನ ಭಾವನೆ ಎನಗಿದು ಜೀವನ ಕೇಳಾ ಲಿಂಗ ತಂದೆ. ನನಗೆ ನನ್ನ ಭಾವನೆಗಳೆ ಜೀವನವಾಗಿದೆ. ಭಾವನೆಗಳು ಶುದ್ಧವಾದವು. ಇದು ಶ್ರೇಷ್ಠವಿಚಾರದ, ಆಚಾರದ ಸೆಲೆ. ನೆಟ್ಟನೆ ನಿಮ್ಮಮನ ಮುಟ್ಟಿ ಪೂಜಿಸಿ ಭವಗೆಟ್ಟೆನು ಕಾಣಾ ಚೆನ್ನಮಲ್ಲಿಕಾರ್ಜುನಾ. ಪರಮಾತ್ಮನೆ ನಿಮ್ಮನ್ನೆ ಪೂಜಿಸಿ ನನ್ನ ದುಃಖಗಳನ್ನು ಕಳೆ ದುಕೊಂಡೆನು. ಶಿವಭಕ್ತರು ಒಕ್ಕಮಿಕ್ಕ ಪ್ರಸಾದ ನೀಡಿದರು. ಅದನ್ನು ಸ್ವೀಕರಿಸಿನನ್ನ ತನು ಶುದ್ಧವಾಯಿತ್ತು ಮಹಾತ್ಮರಾದ ಶರಣರನ್ನು ನೆನೆದು ನನ್ನ ಮನಸ್ಸು ಶುದ್ಧ ವಾಯಿತ್ತು. ಈ ಮಹಾಶರಣರನ್ನು ನೋಡಿದ ಮಾತ್ರಕ್ಕೆ ನನ್ನ ಕಂಗಳು ಶುದ್ಧವಾ ದವು. ಆ ಮಹಾಶರಣರ ಕೀರ್ತಿ ವಾರ್ತೆಯ ಕೇಳಿ ನನ್ನ ಕಿವಿಗಳು ಶುದ್ಧವಾದವು. ಈ

ದಿನಚರಿ ನನಗೆ ಜೀವನವಾಗಿದೆ .ನನಗೆ ಇಂತಹ ಭಾವನೆಗಳೆ ಇವೆ. ಈ ಭಾವನೆಗಳ ನನಗೆ ಜೀವನ. ಚೆನ್ನಮಲ್ಲಿಕಾರ್ಜುನಲಿಂಗವೆ ಭಾವವನ್ನು ಶುದ್ಧ ಮಾಡಿಕೊಂಡ ವಳು ನಾನು. ಪರಮ ಪರಿಣಾಮ ಮೇರೆದಪ್ಪಿನುಡಿದ ವಚನವಿದು.

8) ತನು ನಿಮ್ಮ ರೂಪಾದ ಬಳಿಕ ಆರಿಗೆ ಮಾಡುವೆ.
ಮನ ನಿಮ್ಮ ರೂಪದ ಬಳಿಕ ಆರ ನೆನೆವೆ.
ಪ್ರಾಣ ನಿಮ್ಮ ರೂಪದ ಬಳಿಕ ಆರನಾರಾಧಿಸುವೆ.
ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ಆರನರಿವೆ.
ಚೆನ್ನಮಲ್ಲಿಕಾರ್ಜುನಯ್ಯನಿಮ್ಮಿಂದ ನೀವೆ ಆದಿರಾಗಿ ನಿಮ್ಮನೆ ಅರಿವುತಿರ್ದೆನು.

### ವಚನದ ಅರ್ಥ

ತನು ನಿಮ್ಮ ರೂಪದ ಬಳಿಕ ಆರಿಗೆ ಮಾಡುವೆ, ಮನ ನಿಮ್ಮ ರೂಪಾದ ಬಳಿಕ ಆರ ನೆನೆವೆ. ಈ ದೇಹವು ನಿಮ್ಮ ರೂಪಾಯಿತು. ಇನ್ನು ಹೇಗೆ ಯಾರಿಗೆ ಪೂಜೆ ನಡೆಸಲಿ? ಮನಸ್ಸು ನಿಮ್ಮ ರೂಪಾಯಿತು. ಇನ್ನು ನಾನು ಯಾರನ್ನು ನೆನೆಯಲಿ? ಪ್ರಾಣ ನಿಮ್ಮ ರೂಪಾದ ಬಳಿಕ ಆರನಾರಾಧಿಸುವೆ. ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ಆರನ ರಿವೆ. ಪ್ರಾಣವು ನಿಮ್ಮ ರೂಪಾಯಿತು. ಏನು ಹಾಗಂದರೆ? ಪ್ರಾಣದ ಮುಖ್ಯ ಲಕ್ಷಣ ಪ್ರಜ್ಞೆಮತ್ತು ಚೈತನ್ಯ. ಈ ಪ್ರಜ್ಞೆಯು ಈಗ ದೇಹಗತವಾದುದರಿಂದ ಎಲ್ಲ ದೇಹಗುಣಗಳು ಇದಕ್ಕೆ ಆರೋಪಿತವಾಗಿವೆ. ನಾನು ಹೆಣ್ಣು. ನಾನು ಚೆಲುವೆ. ನಾನು ತರುಣಿ. ಇತರೆಇತರೆ ಹಲವುಭಾವಗಳು ಇದ್ದವು. ಈಗ ಅವೆಲ್ಲವೂ ಹೋದವು.ಈಗ ನಾನು ದೇಹದಲ್ಲಿ ಆತ್ಮ .ಬ್ರಹ್ಮಾಂಡದಲ್ಲಿ ಪರಮಾತ್ಮ. ಇನ್ನು ಆರಾಧಿಸುವವರು ಯಾರು ?ಯಾರನ್ನು?ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮಿಂದ ನೀವೆ ಆದಿರಾಗಿ ನಿಮ್ಮನೆ ಅರಿವುತಿರ್ದೆನು. ಪರಮಾತ್ಮನೆ ನಿಮಗೆ ನೀವೆ ಕಾರಣರಾದಿರಿ. ನಿಮ್ಮನ್ನು ನಾನು ಮೌನದಲ್ಲಿ ಅರಿಯುತ್ತಿರ್ದೆನು. ಪೂಜೆಯ ಭಕ್ತಿಯ ಹಂತ ದಾಟಿದ ವಚನವಿದು. ಈವರೆಗೆ ಚೆನ್ನಮಲ್ಲಿಕಾರ್ಜುನನನ್ನು ಕಾಣುವ ಹಂಬಲ ಅಪಾರವಾಗಿತ್ತು. ಈಗ ತಮ್ಮ ಬದುಕನ್ನು ಅವನಿಗೆ ಕೊಟ್ಟುಕೊಂಡರು. ಜೀವನವೆಲ್ಲ ದೈವೀಮಯವಾಯಿತು. ಅವನನ್ನು ಹಾಸಿಹೊದ್ದುಕೊಂಡ ಜೀವನವಾಯಿತು. ಈಗ ತನುವೆಲ್ಲ ಪರಮಾತ್ಮನಿಗಾಗಿ ತವಕಿಸಿ ತನು ಕೂಡ ಈಗ ಪರಮಾತ್ಮನ ರೂಪಾಯಿತು. ಅಂದರೆ ಅಕ್ಕನವರು ಈಗ ತನುವಿನ ಹಂಗು ಗೆದ್ದರು. ಮನ ನಿಮ್ಮ ರೂಪಾದ ಬಳಿಕ ಆರ ನಾರಾಧಿಸುವೆ . ಈಗ ಮನಸ್ಸಿನ ತುಂಬ ಪರಮಾತ್ಮನೆ ಇದ್ದಾನೆ ಮನಸ್ಸು ಪರಮಾತ್ಮ ಆಯಿತು. ಅಲ್ಲಿ ಬೇಕು ಬೇಡಗಳಿಲ್ಲ ಆಶೆಗಳಿಲ್ಲ .ನಿರೀಕ್ಷೆಗಳೂ ಇಲ್ಲ. ಈಗ ನಿರ್ಮಲ,ನಿಜಾನಂದದ ಸ್ಥಿತಿ. ನೆನೆವ ಮನ ಕೂಡ ಇಲ್ಲದ ಅವಸ್ಥೆ. ಪ್ರಾಣ ನಿಮ್ಮ ರೂಪಾದ ಬಳಿಕ ಆರನಾರಾಧಿಸುವೆ. ಪ್ರಾಣಕ್ಕೆ ಇದುವರೆಗೆ ದೇಹದ ಒಡೆತನವಿತ್ತು. ದೇಹ ಪ್ರಧಾನವಾಗಿದ್ದ ಸ್ಥಿತಿ ಕಳೆದುಕೊಂಡು ಪರಮಾತ್ಮನೆ ಸರ್ವಸ್ವವಾದ ಹಂತ ಏರಿತು. ಪ್ರಾಣವು ಈಗ ಪರಮಾತ್ಮನ ರೂಪಾಯಿತು.ಅಲ್ಲಿ ಪೂಜಿಸುವವರಿಲ್ಲ ಪೂಜೆ ಗೊಂಬವರಿಲ್ಲ.ಬೇಡುವುದೇನು ಇಲ್ಲವಾದಾಗ ಪೂಜೆಯೂ ಇಲ್ಲ. ಇದು ಪ್ರಾಣ ಪರಮಾತ್ಮನಾದ ನೆಲೆ. ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ಆರನರಿವೆ.ಈಅರಿವು ನೀನು ಕೊಟ್ಟದ್ದು. ಅರಿವುನಿನ್ನಲ್ಲಿ ಲಯವಾಯಿತು.ಬುದ್ಧಿಯಿಂದ ತಿಳಿಯಬೇಕು ಎಂದು ಎಷ್ಟೆಲ್ಲ ಬುದ್ಧಿ

ಉಪಯೋಗಿಸುತ್ತೇವೆ. ನಮ್ಮ ಬುದ್ದಿಯೂ ಒಂದು ಕಡೆ ನಿಲುಗಡೆ ಪಡೆಯುತ್ತದೆ. ಅದೂ ನಿನ್ನಲ್ಲಿ ಅಡಗಿತು. ಎಲ್ಲಿಯವರೆಗೆತ್ತದೆ. ಅಲ್ಲಿಯವರೆಗೆ ತಿಳಿಯುವುದು ಇರುತ್ತದೆ. ಈಅರಿವು ಕೂಡ ಈಗ ಹೋಯಿತು. ತಿಳಿಯುವ ಅರಿವು ಕೂಡ ಈಗ ನಿಮ್ಮಲ್ಲಿ ಲಯವಾಯಿತು. ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮಿಂದ ನೀವೆ ಆದಿರಾಗಿ ನಿಮ್ಮನೆ ಅರಿವುತಿರ್ದೆನು. ನೀನು ವಿಶೇಷದವ. ಎಲ್ಲರಿಗೆ ಒಂದು ಮೂಲವಿದೆ .ಆಧಾರವಿದೆ. ಆದರೆ ನಿನಗೊಂದು ಮೂಲವಿಲ್ಲ ಆಧಾರವಿಲ್ಲ. ನಿನ್ನಿಂದ ನೀನೆ ಆದೆ. ಇದು ಹೇಗಾಯಿತು? ನಾನು ನಿಮ್ಮನ್ನು ಮನನ ಮಾಡುತ್ತ ಇದ್ದೇನೆ.

9) ತನುವ ಮೀರಿತ್ತು, ಮನವ ಮೀರಿತ್ತುಘನವ ಮೀರಿತ್ತು.
ಅಲ್ಲಿಂದ ಭಾವಕರಿಲ್ಲವಾಗಿ ತಾರ್ಕಣೆಯಿಲ್ಲ. ಚೆನ್ನಮಲ್ಲಿಕಾರ್ಜುನಯ್ಯನ ಬೆರಸಲಿಲ್ಲದ ನಿಜತತ್ವವು.

## ವಚನದ ಅರ್ಥ

ಚೆನ್ನಮಲ್ಲಿಕಾರ್ಜುನಯ್ಯನ ಬೆರಸಲಿಲ್ಲದ ನಿಜತತ್ವವು ತನುವ ಮೀರಿತ್ತು. ಮನವ ಮೀರಿತ್ತು ಘನವ ಮೀರಿತ್ತು. ಚೆನ್ನಮಲ್ಲಿಕಾರ್ಜುನ ಎಂದರೆ ಬೆರಸಲಸಾಧ್ಯವಾದ ನಿಜತತ್ವ . ಈ ನಿಜತತ್ವವು ತನುಮನಘನವನ್ನು ಮೀರಿ ಇತ್ತು. ಪರತತ್ವದತ್ತ ಭಾವಕರಿಲ್ಲವಾಗಿ ತಾರ್ಕಣೆಯಿಲ್ಲ. ಆ ನಿಜತತ್ವ ದತ್ತ ಭಾವಿಸುವವರು ಇಲ್ಲ. ತರ್ಕವೂ ಇಲ್ಲ. ಪರತತ್ವವು ,ತನುವಿಗೆ ಮನಕ್ಕೆ ಸಿಗದು.ಘನ ಎಂದರೆ ಅದು. ತನ್ನನ್ನು ಮೀರಿ ಇದೆ. ಭಾವನೆಗೆ ಮೀರಿ,ತರ್ಕಗಳಿಗೆ ಮೀರಿ ಇದ್ದಾನೆ. ಆ ನಿಜತತ್ವ ಬೆರಸಲು ಇಲ್ಲದಂತೆ ಇದೆ. ಇದುವರೆಗೆ ಪರಮಾತ್ಮನು ಮನುಷ್ಯ ಸಾಕಾರದ ಸುಳುಹು ನನಗೆ ಲಗ್ನವಾಗುವ ಗಂಡ ಎಂದೆ ತಿಳಿದಿದ್ದರು. ಈಗ ಪರಮಾತ್ಮ ಅವನು ಅಲ್ಲ. ಪರಮಾತ್ಮನೆಂಬುದು ನಿಜ ತತ್ವ. ತರ್ಕ,ಭಾವನೆ,ಭಾಷೆಗಳಿಗೆ ಮೀರಿದಘನ.ಸತ್ಯ ಅನುಭವಕ್ಕೆ ಬಂದಿದೆ.ಅಕ್ಕಮಹಾದೇವಿಯವರಿಗೆ.

10) ತುಂಬಿದುದು ತುಳುಕದು ನೋಡಾ. ನಂಬಿದುದು ಸಂದೇಹಿಸದು ನೋಡಾ. ಒಲಿದುದು ಓಸರಿಸದು ನೋಡಾ.
ನೆರೆಯರಿದುದು ಮರೆಯದು ನೋಡಾ. ಚೆನ್ನಮಲ್ಲಿಕಾರ್ಜುನಯ್ಯ ನೀನೊಲಿದ ಶರಣಂಗೆ ನಿಸ್ಸೀಮ ಸುಖವಯ್ಯ.

## ವಚನದ ಅರ್ಥ

ತುಂಬಿದುದು ತುಳುಕದು ನೋಡಾ ಕೊಡ ಅರ್ಧ ಇದ್ದರೆ ಸಪ್ಪಳ ಮತ್ತು ತುಳುಕಾಡುವುದು ಹೆಚ್ಚು. ನೀರು ತುಂಬಿದ್ದರೆ ಹಾಗೆ ಸಪ್ಪಳ ಇಲ್ಲ. ತುಳುಕಾಡುವುದೂ ಇಲ್ಲ. ಹಾಗೆ ಮನುಷ್ಯರ ವ್ಯಕ್ತಿತ್ವ ಕೂಡ . ಯಾರು

ತಿಳಿದವರು ಇದ್ದಾರೆ ಅವರು ಸಮಾಧಾನಿಗಳು ಶಾಂತರು. ನಿರ್ಮಲಚಿತ್ತರು ಇದ್ದು ಅವರಿಂದ ಎಲ್ಲರಿಗೆ ಒಳಿತ ಆಗುತ್ತದೆ. ನಂಬಿದುದು ಸಂದೇಹಿಸದು ನೋಡಾ ಮಗು ತಾಯಿಯನ್ನು ನಂಬಿದೆ ಅದು ಎಂದೂ ತಾಯಿಯ ಬಗೆಗೆ ಅನುಮಾನ ಪಡುವುದಿಲ್ಲ ಹಾಗೆ ಸ್ನೇಹದಲ್ಲಿ ಕೂಡ. ಅದೇ ರೀತಿ ದೇವರ ಬಗೆಗಿನ ನಂಬಿಕೆಯೂ ಸ್ಥಿರ, ಒಲಿದುದು ಓಸರಿಸ ಸದು ನೋಡಾ. ಇಚ್ಛಿಸಿಪ್ರೀತಿ ಸಿದ ಮೇಲೆ ಅದು ದೂರವಾಗುವುದಿಲ್ಲ. ಇದೆ ನಿಜವಾದ ಪ್ರೀತಿ, ಪ್ರೀತಿಗಾಗಿ ಏನು ಅಡ್ಡಿ ಬಂದರೂ ಎದುರಿಸುವುದೆ ಪ್ರೀತಿ ನೆರೆಯರಿದುದು ಮರೆಯದು ನೋಡಾ. ಈ ದೇಹವು ಪಾಪ ಪುಣ್ಯದ ಒಡಲು ಇದರಿಂದ ನಮಗೆ ಬಂದಿದೆ ಜನ್ಮಜನ್ಮದ ಕಡಲು. ಯಾವುದು ಪಾಪ ಯಾವುದು ಪುಣ್ಯ ಈ ಅರಿವು ಎಂದೂ ಮರೆತು ಹೋಗುವುದಿಲ್ಲ ಚೆನ್ನಾಗಿ ಮನನ ಮಾಡಿದಮೇಲೆ ಅದು ಮರೆತು ಹೋಗದು. ಅರಿವು ಏನಿದೆ ಅದು ಎಂದೂ ಮರೆಯುವುದಿಲ್ಲ ಚೆನ್ನಮಲ್ಲಿಕಾರ್ಜುನಯ್ಯ ನೀನೊಲಿದ ಶರಣಂಗೆ ನಿಸ್ಸಿಮ ಸುಖವಯ್ಯ, ಪರಮಾತ್ಮನ ನೀನು ಯಾರಿಗೆ ಒಲಿದಿರುವ ಅವರು ಹೊಂದುವ ಸುಖ ಮಾತಿನಲ್ಲಿ ವರ್ಣಿಸಲು ಸಾಧ್ಯವಿಲ್ಲ.ಅಲ್ಲಿ ದುಃಖವಿಲ್ಲ ನೋವುಗಳೆಲ್ಲ ಆನಂದದ ಅಲೆಗಳಮೇಲೆ ಭಕ್ತನ ಉಯ್ಯಾಲೆ. ಈ ವಚನ ಮಹಾತ್ಮರು ಜ್ಞಾನಿಗಳ ವ್ಯಕ್ತಿತ್ವವನ್ನು ವ್ಯಾಖ್ಯಾನಿಸುತ್ತವೆ. ಪರಿಪೂರ್ಣ ವ್ಯಕ್ತಿತ್ವಗಳಿಸಿಕೊಂಡ ಆ ಮಹಾತ್ಮರು ತುಂಬಿದ ಕೊಡದಂತೆ ತುಳು ಕುವುದಿಲ್ಲ. ಅವರು ನಿರ್ಮಲ ಚರಿತ್ರರು. ಅಪಾರ ಪ್ರೀತಿಯನ್ನು ತಮ್ಮ ಮನಸ್ಸು
ಹೃದಯದಲ್ಲಿ ಉಳ್ಳವರು. ಎಲ್ಲರನ್ನು ತನ್ನಂತೆ ಕಾಣುತ್ತಾರೆ.

11) ತಾನುದಂಡುಮಂಡಲಕ್ಕೆ ಹೋದರಹೆಂದಡೆ ನಾನು ಸುಮ್ಮನಿಹೆನಲ್ಲದೆ
ತಾನೆನ್ನ ಕೈಯೊಳಗಿದ್ದು ತಾನೆನ್ನ ಮನದೊಳಗಿದ್ದು
ಎನ್ನ ಕುಡದಿದ್ದಡೆ ನಾನೆಂತು ಸೈರಿಸುವೆನವ್ವಾ. ನೆನಹೆಂಬ ಕುಂಟಣಿ
ಚೆನ್ನಮಲ್ಲಿಕಾರ್ಜುನನ
ನೆರಹದಿದ್ದರೆ ನಾನೇವೆ ಸಖಿಯೆ?

## ಪದಗಳ ಅರ್ಥ

ದಂಡು-ಸೇನೆ
ಮಂಡಲ- ಪ್ರದೇಶ.
ಕೂಡು-ಸಂಸಾರ ಮಾಡು.
ಸೈರಿಸು-ಸಮಾಧಾನಿಸು.
ಕುಂಟಣಿ-ಮಧ್ಯವರ್ತಿನಿ, ಲಗ್ನಮಾಡಿಸುವ ರಾಯಭಾರಿ, ದೂತೆ.
ನೆರಹು-ಒಂದು ಗೂಡಿಸು. ಏವೆನ್-ಏನುಮಾಡಲಿ?

## ವಚನದ ಅರ್ಥ

ತಾನು ದಂಡುಮಂಡಲಕ್ಕೆ ಹೋದರೆ ಸುಮ್ಮನಿದ್ದಹನು. ಯಾವುದಾದರೂ ದೂರದೇಶಕ್ಕೆ ಯುದ್ದಕ್ಕೆ ,ವ್ಯವಹಾರಕ್ಕೆ ನಿಮಿತ್ತವಾಗಿ ಹೋಗಿದ್ದರೆ ಸುಮ್ಮನಿರಬಹುದು. ಆದರೆ ನನ್ನ ಕರಸ್ಥಲದಲ್ಲಿದ್ದುಕೊಂಡೆ ನನ್ನ ಜೊತೆ

ಮಾತನಾಡದಿದ್ದರೆ ನಾನು ಏನು ಮಾಡಲಿ? ಎನ್ನ ಕೈಯೊಳಗಿದ್ದು ತಾನೆನ್ನ ಮನದೊಳಗಿದ್ದು ಎನ್ನ ನುಡಿಸದಿದ್ದಡ ಎಂತು ಸೈರಿಸುವೆನವ್ವ?ನನ್ನ ಕರಸ್ಥಲದಲ್ಲಿದ್ದಾನೆ. ನನ್ನ ಮನದೊಳಗಿದ್ದಾನೆ. ಹೀಗಿದ್ದೂ ನನ್ನ ಮಾತನಾಡಿಸದೆ ಹೋದರೆ ಅದನ್ನು ನಾನು ಹೇಗೆ ಸೈರಿಸಲಿ? ನೆನೆಹೆಂಬ ಕುಂಟಣಿ ಚೆನ್ನಮಲ್ಲಿಕಾರ್ಜುನನ ನೆರಹದಿರ್ದಡೆ ನಾನೇವೆ ಸಖಿಯೆ? ನೆನಪು ಎಂಬ ದೂತೆ ನನ್ನನ್ನು ಚೆನ್ನಮಲ್ಲಿಕಾರ್ಜುನದೇವರೊಂದಿಗೆ ಸೇರಿಸದೆ ಹೋದರೆ ಅದನ್ನು ನಾನು ಹೇಗೆ ತಾಳಿಕೊಳ್ಳಲಿ?ಸಖಿಯೆ ನೀನಾದರೂ ನನ್ನ ಅವಸ್ಥೆಯನ್ನು ಗಮನಿಸಿ ಪರಿಹಾರ ದೊಕಿಸಿಕೊಡು.ವಿರಹದ ಉತ್ಕಟಸ್ಥಿತಿಯ ವಚನವಿದು. ಅತ್ಯಂತ ವಿಕಳಾವಸ್ಥೆಯಲ್ಲಿದ್ದಾರೆ. ಈಗ ಅನ್ನ, ನೀರು, ನಿದ್ರೆ, ಓದು ಮಾತು ಯಾವುದೊಂದು ಬೇಕಿಲ್ಲದ ಸ್ಥಿತಿ ಅವರದಾಗಿದೆ. ಅವರ ಭಕ್ತಿ ತುರೀಯ ಅವಸ್ಥೆಯನ್ನು ಮುಟ್ಟಿದೆ.

12) ತನುವನುವಾಯಿತ್ತು. ಮನವನುವಾಯಿತ್ತು. ಪ್ರಾಣವನುವಾಯಿತ್ತು. ಮುನಿದು ಬಾರದ ಪರಿ ಇನ್ನೆಂತು ಹೇಳಾ? ಎನ್ನ ಪ್ರಾಣದಲ್ಲಿ ಸಂದು ಎನ್ನ ಮನಕ್ಕೆ ಮನವಾಗಿ ನಿಂದ ಎನ್ನ ದೇವ ಚೆನ್ನಮಲ್ಲಿಕಾರ್ಜುನನ ಕಾಣದಡೆ ಆನೆಂತು ಬದುಕುವೆ?

### ಪದಗಳ ಅರ್ಥ

ಅನು-ಸಿದ್ಧವಾಗಿದೆ.
ಮುನಿ-ಕೋಪಿಸಿ,
ಸಂದು- ಇದ್ದು.

### ವಚನದ ಅರ್ಥ

ತನುವನುವಾಯಿತ್ತು. ಮನವನುವಾಯಿತ್ತು. ಪ್ರಾಣವನುವಾಯಿತ್ತು. ಮುನಿದು ಬಾರದ ಪರಿ ಎಂತು ಹೇಳಾ? ಎನ್ನ ತನುಮನಪ್ರಾನ ಇವು ಮೂರೂ ನಿನಗಾಗಿ ಕಾತರಿಸಿವೆ. ನೀನು ನನ್ನ ಮೇಲೆ ಕೋಪಿಸಿಕೊಂಡು ಬಾರದಿರುವ ಕಾರ ಣವಾದರೂ ಏನು?ಎನ್ನ ಪ್ರಾಣದಲ್ಲಿ ಸಂದು ಎನ್ನ ಮನಕ್ಕೆ ಮನವಾಗಿ ನಿಂದ ಎನ್ನ ದೇವ ಚೆನ್ನಮಲ್ಲಿಕಾರ್ಜುನನ ಕಾಣದಡೆ ಆನೆಂತು ಬದುಕುವೇ? ನೀನು ನನ್ನ ಪ್ರಾಣದಲ್ಲಿಯೆ ಇದ್ದು ನನ್ನ ಮನದಲ್ಲಿ ಮನವಾಗಿ ಇದ್ದು ನನ್ನನ್ನು ಹುರಿಗೊಳಿಸುತ್ತಿರುವೆ .ಇಂತಹ ನಿನ್ನನ್ನು ನಾನು ಪ್ರತ್ಯಕ್ಷ ಕಾಣದೆ ಇದ್ದರೆ ನಾನು ಹೇಗೆ ಬದುಕಲಿ? ಅಕ್ಕಮಹಾದೇವಿಯವರ ತನುಮನಪ್ರಾಣಗಳು ಭೌತಿಕವಾಗಿ ಚೆನ್ನಮಲ್ಲಿಕಾರ್ಜು ನನ ಸಮಾಗಮಕ್ಕಾಗಿ ಕಾತರಿಸಿವೆ. ಆದರೆ ಅದಕ್ಕೆ ದಾರಿ ತಿಳಿಯುತ್ತಿಲ್ಲ.

13) ತನು ಮೀಸಲಾಗಿ, ಮನ ಮೀಸಲಾಗಿ ಭಾವವಚ್ಚುಗೊಂಡಿಪ್ಪುದವ್ವಾ. ಅಚ್ಚುಗನ ಸ್ನೇಹ ನಿಚ್ಚಟದ ಮೆಚ್ಚುಗೆ

ಬೆಚ್ಚು ಬೇರಾಗದ ಭಾವವಾಗೆ ಚೆನ್ನಮಲ್ಲಿಕಾರ್ಜುನಯ್ಯ ಒಳಗೆ
ಗಟ್ಟಿಗೊಂಡಿಪ್ಪನವ್ವಾ,

## ಪದಗಳ ಅರ್ಥ

ಅಚ್ಚುಗೊಳ್-ಅಕಾರಗೊಳ್.
ನಿಶ್ಚಟ-ನಿತ್ಯ.
ಬೆಚ್ಚು-ಜೋಡಿಯಾದ, ಬೆಸುಗೆಯಾದ

## ವಚನದ ಅರ್ಥ

ತನು ಮೀಸಲಾಗಿ ಮನ ಮೀಸಲಾಗಿ ಭಾವವಚ್ಚುಗೊಂಡಿಪ್ಪುದವ್ವಾ. ನನ್ನ ತನು,ಮನ ಭಾವಗಳುಪರಮಾತ್ಮನೆ ನಿನಗೆ ಮೀಸಲಾಗಿವೆ. ನಿನಗಾಗಿಯೆ ಆಕಾರಗೊಂಡಿವೆ. ಆಚ್ಚುಗನ ಸ್ನೇಹ ನಿಚ್ಚಟದ ಮೆಚ್ಚುಗೆ ಬೆಚ್ಚು ಬೇರಾಗದ ಭಾವವಾಗೆ ನನ್ನತನುಮನಭಾವದಮೇಲೆ ತನ್ನ ಮುದ್ರೆ ಹಾಕಿದ ಪರಮಾತ್ಮನ ಪ್ರೀತಿಸ್ನೇಹ ನನಗೆ ನಿತ್ಯ ಇಷ್ಟವಾದ ಮೆಚ್ಚಿಗೆಯಾಗಿದೆ. ನಿನ್ನಲ್ಲಿ ನನ್ನ ಮನ, ಭಾವ ಬೆಸೆದುಕೊಂಡಿದೆ. ಚೆನ್ನಮಲ್ಲಿಕಾರ್ಜುನಯ್ಯ ಒಳಗೆ ಗಟ್ಟಿಕೊಂಡಿಪ್ಪನವ್ವಾ. ಚೆನ್ನಮಲ್ಲಿಕಾರ್ಜುನನ ಮೂರ್ತಿ ನನ್ನ ಭಾವದಲ್ಲಿ ಆಕಾರಗೊಂಡಿದೆ.

ಇಡೀ ವಚನ ಒಂದುರೂಪಕವಾಗಿ ಚಿತ್ರಿತವಾಗಿದೆ. ಎರಕಹೊಯ್ದು ಆಕಾರಗೊಳಿಸಿ ಮೂರ್ತಿ ನಿರ್ಮಾಣ ಮಾಡಲಾಗುತ್ತದೆ. ಆ ಒಂದು ವಿಧಾನವನ್ನೆ ಇಲ್ಲಿ ರೂಪಕವಾಗಿ ಚಿತ್ರಿಸಿದ್ದಾರೆ. ಯಾವ ಅಚ್ಚಿಗೆ ಪಾಕವನ್ನು ಸುರಿದರೆ ಆ ಆಕಾರ ದಲ್ಲಿ ವಸ್ತುಗಳು ರೂಪಪಡೆಯುತ್ತವೆ. ಹಾಗೆ ಇಲ್ಲಿ ಅಕ್ಕನವರ ಮನಸ್ಸು ಪರಮಾತ್ಮನ ಅಚ್ಚಿಗೆ ಸಿದ್ದಗೊಂಡಿದೆ. ಅವರ ಮನ ಭಾವಗಳು ಪರಮಾತ್ಮ ಎನ್ನುವ ಅಚ್ಚಿಗೆ ಅಣಿಗೊಂಡಿವೆ. ಅಕ್ಕಮಹಾದೇವಿಯವರು ಯಾವುದೆ ಚಿತ್ರಣ ನೀಡಿದರೂ ಅವು ಸುಂದರವಾಗಿವೆ ಮತ್ತು ಅತ್ಯಂತ ಚಿತ್ರವಾತ್ತಾದ ಪರಿಣಾಮಕಾರಿ ಚಿತ್ರಣವನ್ನು ಕಟ್ಟಿ ಕೊಡುತ್ತಾರೆ. ಅವರ ವಚನಗಳಲ್ಲಿ ಚಿತ್ರಕ ಶಕ್ತಿ ವಿಶೇಷವಾಗಿದೆ.

14) ತನ್ನವಸರಕ್ಕಾಗಿ ಹಗಲು ಗನ್ನವನಿಕ್ಕಿದರೆ
ತನ್ನ ಸವೆಯಲಿಲ್ಲ. ಕಳವು ದೊರೆಯಲಿಲ್ಲ. ಬೊಬ್ಬುಲಿಯನೇರಿದ
ಮರ್ಕಟನಂತೆ ಹಣ್ಣ ಮೆಲಲಿಲ್ಲ. ಕುಳ್ಳಿರೆ ಠಾವಿಲ್ಲ. ನಾನು ಸರ್ವಸಂಗ
ಪರಿತ್ಯಾಗವ ಮಾಡಿದವಳಲ್ಲ
ನಿಮ್ಮ ಕೂಡಿ ಕುಲವಳಿಯಲಿಲ್ಲ ಚೆನ್ನಮಲ್ಲಿಕಾರ್ಜುನಾ.

## ಪದಗಳ ಅರ್ಥ

ಅವಸರ-ತುರ್ತು. ಬೇಗಬೇಗ. ಹಗಲುಗನ್ನ-ಹಗಲಿನಲ್ಲಿ ಮನೆ
ಕನ್ನಹಾಕಿ ,ಕಳ್ಳತನ ಮಾಡಲು ಹೋದದ್ದು.

ಕನ್ನ- ಗೋಡೆ ರಂಧ್ರ, ಸುರಂಗ ಕೊರೆಯು ವುದು. ಬೊಬ್ಬುಲಿ-
ಜಾಲಿಮರ .ಗೊಬ್ಬಳಿಮರ. ಮರ್ಕಟ-ಮಂಗ.
ಠಾವು-ಸ್ಥಳ.
ಪರಿತ್ಯಾಗ- ಎಲ್ಲ ವನ್ನು ನಿರಾಕರಿಸುವುದು.

## ವಚನದ ಅರ್ಥ

ತನ್ನವಸರಕ್ಕಾಗಿ ಹಗಲುಗನ್ನವನಿಕ್ಕಿದರೆ ಕನ್ನಸವೆಯಲಿಲ್ಲ. ಕಳವು ದೊರೆಯಲಿಲ್ಲ. ನನಗೆ ಕೂಡಲೆ ಪರಮಾತ್ಮ ಬೇಕು ಎಂದು ನಾನು ಈ ಜೀವನಕ್ಕೆ ಬಂದೆ ಆದರೆ ಏನಾಯಿತು? ತುರ್ತಾಗಿ ಹಣಬೇಕು ಎಂದು ಹಗಲಿನಲ್ಲಿ ಮನೆ ಕನ್ನ ಕೊರೆಯಲು ಕಳ್ಳತನಕ್ಕೆ ಹೋದ ಹಾಗಾಯಿತು. ಕನ್ನ ಕೊರೆಯಲು ಆಗಲಿಲ್ಲ. ಕಳವುಸಿಗಲಿಲ್ಲ.ಬೊಬ್ಬುಲಿಯನೇರಿದ ಮರ್ಕಟನಂತೆ ಹಣ್ಣ ಮೆಲಲಿಲ್ಲ. ಕುಳ್ಳಿರೆ ಠಾವಿಲ್ಲ, ಕೋತಿ ಗೊಬ್ಬಳಿಮರ ಏರಿದ ಹಾಗಾಯಿತು. ಅಲ್ಲಿ ತಿನ್ನಲು ಹಣ್ಣು ಇಲ್ಲ. ಕುಳಿತುಕೊಳ್ಳಲು ಸ್ಥಳವಿಲ್ಲ.ನಾನು ಸರ್ವಸಂಗ ಪರಿತ್ಯಾಗವ ಮಾಡಿದವಳಲ್ಲ. ನಿಮ್ಮ ಕೂಡಿ ಕುಲವಳಿಯಲಿಲ್ಲ. ಪರಮಾತ್ಮ ಚೆನ್ನಮಲ್ಲಿಕಾರ್ಜುನನೆ ನಾನೇನು ಎಲ್ಲವನ್ನು ತ್ಯಾಗಮಾಡಿ ಬರಲಿಲ್ಲ. ನಿನ್ನನ್ನು ಸೇರಿ ನಾನು ಭವ ವನ್ನು ಕಳೆದುಕೊಳ್ಳಲಿಲ್ಲ.

ತಮಗೆ ಕೂಡಲೆ ಪರಮಾತ್ಮನ ಸಾಕ್ಷಾತ್ಕಾರವಾಗಬೇಕು ಎಂದು ಅಕ್ಕನವರು ಹಂಬಲಿಸಿದರು. ಅದರೆ ಅದು ಸಾಧ್ಯವಾಗದುದನ್ನು ಎರಡು ಸುಂದರ ದೃಷ್ಟಾಂತಗಳ ಮೂಲಕ ಚಿತ್ರಿಸಿದ್ದಾರೆ. 1.ಕನ್ನಕೊರೆಯಲು ಹೋದ ದೃಷ್ಟಾಂತ.2.ಗೊಬ್ಬಳಿ ಮರವನ್ನು ಕೋತಿ ಏರಿದ ದೃಷ್ಟಾಂತ. ಎರಡೂ ಫಲ ನೀಡ ಲಿಲ್ಲ. ಕೋತಿ ಏನೊ ಮರ ಎಂದು ಹತ್ತಿಬಿಟ್ಟಿತು. ಅದೊ ಜಾಲಿಮರ. ಹಣ್ಣು ಇಲ್ಲ. ಕೂಡಲು ಸ್ಥಳವೂ ಇಲ್ಲ. ಕಳ್ಳನ ಕಥೆಯೂ ಅಷ್ಟೆ. ಅವನಿಗೆ ಕೂಡಲೆ ಹಣ ಬೇಕು. ಹಗಲಿನಲ್ಲಿ ಕನ್ನ ಕೊರೆದು ಕಳ್ಳತನ ಮಾಡಲು ಹೋಗಿದ್ದಾನೆ. ಅದು ಹಗಲಾದು ದರಿಂದ ಸಾಧ್ಯವಾಗುವುದಿಲ್ಲ. ಹಾಗೆ ಅಕ್ಕಮಹಾದೇವಿಯವರಿಗೆ ಕೂಡಲೆ ಪರಮಾತ್ಮ ಬೇಕು ಎಂದು ಅನುಭಾವ ಜೀವನಕ್ಕೆ ಬಂದರು . ಪರಮಾತ್ಮ ಸಿಗುತ್ತಿಲ್ಲ. ಈ ಜೀವನದಲ್ಲಿ ಆಶ್ರಯ, ರಕ್ಷಣೆಯೊಂದು ಬೇಕಲ್ಲ. ಅವರ ಆತಂಕದ ದಿನಗಳನ್ನು ತುಂಬ ಶಕ್ತವಾಗಿ ಈ ದೃಷ್ಟಾಂತಗಳು ತಿಳಿಸುತ್ತವೆ.

/